1998-99ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ
(ಮುಂದುವರಿದ ಚರ್ಚೆ)

+ ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಸರ್ಕಾರ ಎನ್ನತಕ್ಕಂಥಾದ್ದು ಈ ಮನೆಯ ಒಂದು ಅಂಗ. ಸರ್ಕಾರಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ವಿರೋಧಪಕ್ಷಗಳಿಗೂ ಇದೆ. ಬೇಡಿಕೆಗಳ ಮೇಲೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಈ ಸಭೆಯಲ್ಲಿ ಮಾತನಾಡಿದಂತಹ ಅನೇಕ ಜನ ವಿರೋಧಪಕ್ಷದ ಸದಸ್ಯರು ಒಂದೊಂದು ಇಲಾಖೆಯನ್ನು ಹಿಡಿದು ಚರ್ಚೆ ಮಾಡಿರುವಂತಹ ಸಂದರ್ಭದಲ್ಲಿ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿರುತ್ತಾರೆ. ಮತ್ತು ತಾವು ಕೊಟ್ಟಂತಹ ಉತ್ತರದಲ್ಲಿ ತಮ್ಮ ದೂರದೃಷ್ಟಿ ಇದು ಯಾವುದಕ್ಕೂ ಕೂಡ ನಾವು ಏನೂ ವಿರೋಧ ಇಲ್ಲ. ತಮ್ಮ ಭಾಷಣದ ಪ್ರತಿ ಅಂಶಗಳನ್ನು ಸಹ ನಾವು ಒಪ್ಪೋಣ. ಆದರೆ ನಾವು ಟೀಕೆ ಮಾಡಬೇಕಾದರೆ ಯಾವತ್ತೂ ಕೂಡ ಒಂದು ರಾಜ್ಯದ ಆಡಳಿತ ದೃಷ್ಟಿಯಿಂದ ಮಾಡುತ್ತೇವೆಯೇ ವಿನಹಃ ವೈಯಕ್ತಿಕವಾಗಿ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧವಾಗಿ ಮಾಡತಕ್ಕಂಥ ಟೀಕೆಗಳು ಅಲ್ಲ. ಯಾರೇ ಅಧಿಕಾರದಲ್ಲಿ ಕುಳಿತಿದ್ದರೂ ಕೂಡ ಈ ಜಾಗದಲ್ಲಿ ನೀವೇ ಕುಳಿತಿದ್ದರೂ ಕೂಡ ಇನ್ನು ಯಾರೇ ಕುಳಿತಿದ್ದರೂ ಕೂಡ ಆ ಮುಖ್ಯಮಂತ್ರಿಗಳ ಕುರ್ಚಿ ಹಿಂದೆ ಸೈಕೋಪಾಯಿಂಟ್ಸ್ ಡೆವಲಪ್ ಆಗುವಂಥಾದ್ದು ಸ್ವಾಭಾವಿಕ, ಅದು ತಮಗೂ ಕೂಡ ಗೊತ್ತಿರತಕ್ಕಂಥಾದ್ದು. ಅವರ ಬಗ್ಗೆ ಎಚ್ಚರಿಕೆ ಇರಲಿ ಎನ್ನತಕ್ಕಂಥಾದ್ದನ್ನು ಸಾರ್ವಜನಿಕವಾಗಿ ಜನಗಳ ಭಾವನೆಯಿಂದ ಬಂದಿರತಕ್ಕಂಥ ವಿಷಯವನ್ನು ನಾವು ತಮ್ಮ ಮುಂದೆ ಇಡತಕ್ಕಂಥದ್ದನ್ನು ನಮ್ಮ ನಾಯಕರು ಪ್ರಾಮಾಣಿಕವಾಗಿ ಮಾಡಿದ್ದಾರೆ. ಅದಕ್ಕೆ ಬೇರೆ ಅರ್ಥವನ್ನು ಕೊಡುವುದು ಬೇಡ ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಪ್ರತಿ ಬೇಡಿಕೆಗಳು ಕೂಡ ಚರ್ಚೆ ಆಗಿ ಆ ಇಲಾಖೆಯಲ್ಲಿ ಆಗಿರುವಂತಹ ಲೋಪದೋಷಗಳನ್ನು ಎತ್ತಿ ಹಿಡಿಯುವಂತಹ ಸಂದರ್ಭದಲ್ಲಿ ಪ್ರತಿ ಆರೋಪಗಳಿಗೆ ಪ್ರತ್ಯುತ್ತರವನ್ನು ಕೊಡುವಂತಹ ಸಂದರ್ಭ ಇದಿದ್ದರೆ ಇವತ್ತು ನೀವು ನಮ್ಮನ್ನು ವಿರೋಧ ಮಾಡುತ್ತೀರಿ ಎಂದು ಹೇಳುವಂತಹ ಕಲ್ಪನೆ ನಿಮಗೆ ಬರುತ್ತಿರಲಿಲ್ಲ. ಕಾರಣ ಇವತ್ತು ಕೃಷಿ ಇಲಾಖೆಯ ಮೇಲೆ ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಮಾನ್ಯ ಬೈರೇಗೌಡರು 5-6 ಗಂಟೆಗಳ ಕಾಲ ಉತ್ತರ ಕೊಟ್ಟರೂ ಕೂಡ ನಾವು ಮಾಡಿದಂತಹ ಭಾಷಣ ಮತ್ತು ಟೀಕೆಗಳು ಅದಕ್ಕೆ ಉತ್ತರ ಈ ರೀತಿಯಾಗಿಯೂ ಕೂಡ ಸುಮಾರು 5-6 ಗಂಟೆಗಳು ಆಗುವುದಕ್ಕೆ ಸಾಧ್ಯವಾಯಿತು. ಆ ರೀತಿಯಲ್ಲಿ ಚರ್ಚೆ ಆಗುವುದಕ್ಕೆ ಅವಕಾಶಗಳನ್ನು ಮಾಡಬೇಕೆನ್ನುವುದರ ಜೊತೆಗೆ ತಮ್ಮ ಉತ್ತರದಿಂದ ಇವತ್ತು ರಾಜ್ಯದ ಜನ ಸಾಕಷ್ಟು ನಿರೀಕ್ಷೆಗಳನ್ನು ಮಾಡುತ್ತಿರುತ್ತಾರೆ. ಸರ್ಕಾರದ ನೀತಿಗಳು, ಸರ್ಕಾರದ ಬೇಡಿಕೆಗಳಿಗೆ ಈ ಸದನ ಒಪ್ಪಿಗೆ ಕೊಡುವಂತಹ ಸಂದರ್ಭದಲ್ಲಿ ನಿಮ್ಮ ನೀತಿಯ ಜೊತೆಗೆ ನಿಮ್ಮ ಸಾಧನೆಗಳನ್ನು ಸಹ ನೋಡುವಂತಹ ಸಂದರ್ಭದಲ್ಲಿ ಇವತ್ತು ಅನೇಕ ವಿಷಯಗಳು, ಅನುಮಾನಗಳು ಕೂಡ ಎಲ್ಲರ ಮನಸ್ಸಿನಲ್ಲಿರುವುದನ್ನು ನಾನು ಇಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ತಾವು ಮಾತನಾಡುವಾಗ ಕೈಗಾರಿಕೆಗಳ ಮೇಲೆ ಸಾಕಷ್ಟು ಒತ್ತು ಕೊಟ್ಟಿದ್ದೇವೆ ಎಂದು ಹೇಳಿದಿರಿ. ಮಾನ್ಯ ಅರ್ಥಸಚಿವರು ಬಜೆಟ್ ಮಂಡಿಸಿದ ಸಂದರ್ಭದಲ್ಲಿ ಹೇಳಿದ್ದುಂಟು

ಇಂಡಸ್ಟ್ರಿಯಲ್ ರಿಸಿಶನ್ ಆಗಿದ್ದು ಈ ರಾಜ್ಯದಲ್ಲಿ, ಅದ ಕಾರಣ ನಮಗೆ ಬರುವ ಆದಾಯ ಬಹಳ ಕಡಿಮೆಯಾಗಿದೆ ಎಂದು ಕೂಡ ತಾವು ಒಪ್ಪುತ್ತೀರಿ. ಬಹಳ ಮುಖ್ಯವಾಗಿ, ಅತ್ಯಂತ ಕಷ್ಟದಲ್ಲಿರುವ, ನಷ್ಟದಲ್ಲಿರುವ, ಸಣ್ಣ ಕೈಗಾರಿಕೆಗಳಿಗೆ ಯಾವರೀತಿಯಾದ ಕಾಯಕಲ್ಪ ಮಾಡುತ್ತೀರಿ ಎಂದು ಹೇಳಿದರೆ ಬಹಳ ಚೆನ್ನಾಗಿತ್ತು. ಅದರ ಬಗ್ಗೆ ಏನು ತಮ್ಮ ನಿಲುವು ಎಂದು ಗೊತ್ತಾಗಲಿಲ್ಲ. ಕೈಗಾರಿಕಾ ಸಚಿವರಾದರೂ ಅದನ್ನು ಹೇಳಬೇಕು. ಏಕೆಂದರೆ ಒಂದು ಕಡೆ ಕೈಗಾರಿಕೆಗಳನ್ನು ಒತ್ತು ಕೊಟ್ಟು ಬೆಳೆಸುತ್ತೀರಿ ಎಂದು ಹೇಳುವ ಸಂದರ್ಭದಲ್ಲಿ 228 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಕೊಡದೇ ಇರುವಾಗ ತಮ್ಮ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡಬೇಕಾಗುವುದು ಎಂದು ತಾವೇ ಯೋಚನೆ ಮಾಡಬೇಕು ಎಂದು ಹೇಳುತ್ತಾ, ನಮ್ಮ ರಾಜ್ಯದಲ್ಲಿರುವ ಅನೇಕ ಕೈಗಾರಿಕೋದ್ಯಮಿಗಳೇನಿದ್ದಾರೆ ದೇಶವಿದೇಶಗಳಿಂದ ಬಂದಿರುವ ಕೈಗಾರಿಕೋದ್ಯಮಿಗಳು ಇವತ್ತು ಹೊರ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ ಎಂದು ಎಲ್ಲ ಪತ್ರಿಕೆಗಳಿಂದ ತಿಳಿದುಬಂದಿದೆ. ಆಂಧ್ರಪ್ರದೇಶ, ತಮಿಳುನಾಡಿಗೆ ಹೊರಗೆ ಹೋಗುತ್ತಿವೆ. ಅದಕ್ಕೆ ಎಲೆಕ್ಟ್ರಿಸಿಟಿ ಕಾರಣ ಇರಬಹುದು. ಆದರೆ, ಇನ್‌ಫ್ರಾಸ್ಟ್ರಕ್ಚರ್ ಕೊಡುವದರಲ್ಲೂ ತಪ್ಪಾಗಿದೆ ಎಂಬುದನ್ನು ತಾವು ಒಪ್ಪಬೇಕಾಗುತ್ತದೆ. ಅದರ ಬಗ್ಗೆ ತಮ್ಮ ನೀತಿಯೇನು? ತಮ್ಮ ಈಗಿನ ಕೈಗಾರಿಕಾನೀತಿಯಿಂದ ಜನರಿಗೆ ಹೆಚ್ಚು ಸಹಾಯವಾಗಿಲ್ಲ, ಫಲಪ್ರದಾವಾಗಿದ್ದರೆ ಅವರು ಹೊರಗೆ ಹೋಗುತ್ತಿರಲಿಲ್ಲ. ಮತ್ತೊಂದು ಮುಖ್ಯವಾಗಿ ನಿಮ್ಮ ಉತ್ತರ ನಿರೀಕ್ಷೆ ಮಾಡಿದ್ದು ಅಂದರೆ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಸರ್ಕಾರದ ನಿಲುವೇನು ಎಂದು ಇಲ್ಲಿವರೆಗೆ ಗೊತ್ತಾಗಲಿಲ್ಲ. ಕೇಂದ್ರದಲ್ಲಿ ಬಂದ ಸರ್ಕಾರವೊಂದು ಹೆಚ್‌ಎಎಲ್ ನಿಲ್ದಾಣವನ್ನೇ ಮೇಲ್ದರ್ಜೆಗೇರಿಸುತ್ತೇವೆ. ಎಂದು ಹೇಳಿದ್ದರಿಂದ ಅದನ್ನು ಸೆಕೆಂಡರಿಯಾಗಿ ಇಟ್ಟುಕೊಂಡ ಹಾಗೆ ಕಾಣುತ್ತದೆ. ಮತ್ತು ತಾವು ಉತ್ತರ ಕೊಡುವಾಗ ಕೃಷ್ಣ ಜಲ ಭಾಗ್ಯ ನಿಗಮದ ಮಾದರಿಯಲ್ಲಿ ಬಾಂಡ್‌ಗಳನ್ನು ತೆಗೆಯಬೇಕೆಂದು ಹೇಳಿದ್ದಕ್ಕೆ ನಾನು ಕೆಲವು ಸಲಹೆ ಕೊಡಲು ಇಷ್ಟಪಡುತ್ತೇನೆ: ಕಾವೇರಿ ಜಲಾನಯನ ಪ್ರದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನ ತೊಡಗಿಸಬೇಕಾಗುತ್ತದೆ. ಆಧುನೀಕರಣ ಇರಬಹುದು ಅಥವಾ ನೀರಿನ ಹಕ್ಕು ಉಳಿಸಿಕೊಳ್ಳುವ ಕೆಲಸವಾಗಿರಬಹುದು ಅಥವಾ ತುಮಕೂರಿನಲ್ಲಿ ಬರುವ ಹೇಮಾವತಿ ಕೆಲಸ ಇರಬಹುದು ಇವೆಲಕ್ಕಾಗಿ ಕಾವೇರಿ ಜಲಾನಯನಕ್ಕೂ ನಿಗಮ ಮಾಡಿ ಬಾಂಡ್ ಮುಖೇನ ಹಣ ಪಡೆದು ಕೆಲಸ ಮಾಡುವುದು ಸೂಕ್ತ ಎಂದು ಹೇಳುತ್ತಾ, ಮತ್ತೊಂದು ಬಹಳ ಮುಖ್ಯವಾಗಿ ವಿದ್ಯುತ್ ಬ ಮಾಡಿರುವ ಸಾಧನೆ ಬಗ್ಗೆ ಹೇಳಿದ್ದೀರಿ, ಒಪ್ಪುತ್ತೇನೆ: ಒಂದನ್ನು ತಾವು ಅರ್ಥಮಾಡಿಕೊಳ್ಳಬೇಕ ನೀವು ಮಾಡಿದ ಪ್ರಯತ್ನಗಳನ್ನು ನಾವು ಅಲ್ಲಗೆಳೆಯುವುದಿಲ್ಲ, ಚಿತ್ರದುರ್ಗದಲ್ಲಿ ಕೊಪ್ಪಳದ ಆಗುತ್ತಿರುವುದನ್ನೆಲ್ಲ ನಾವು ನೋಡಿದ್ದೇವೆ. ಇವತ್ತು 13 ಸಾವಿರ ಮೆಗಾವ್ಯಾಟ್ ಬೇಕಾಗಿರುವಾ ಕೇವಲ 30, 40 ಮೆಗಾವ್ಯಾಟ್‌ನಿಂದ ಸಾಧನೆ ಅಂತ ಅಲ್ಲದಿದ್ದರೂ ಆ ಗ್ಯಾಪನ್ನು ಭರ್ತಿ ಮಾಡೇ ಒಂದು ಅಲ್ಪಕಾಲಿಕ ಮತ್ತು ದೀರ್ಘಕಾಲಿಕ ಯೋಜನೆಗಳನ್ನು, ಕೊಜೆಂಟ್ರಿಕ್ಸ್, ಬಗ್ಗೆ, ಕೇಂ ಸರ್ಕಾರಕ್ಕೆ ಹೋಗಿ ಎಷ್ಟು ವರ್ಷ ಆಯಿತು? ಇಲ್ಲಿವರೆಗೆ ಯಾಕೆ ಆಗಲಿಲ್ಲ? ಇವತ್ತಿನ ಪತ್ರಿಕೆಯಲ ಅದು ಚರ್ಚೆಯಾಗಿದೆ. ಈಗ ಅಣುಸ್ಫೋಟ ಮಾಡಿದ ಮೇಲೆ ನಮ್ಮ ಮೇಲೆ ಹಾಕು

ನಿಬಂಧನೆಗಳಿಂದಾಗ ಈ ಯೋಜನೆ ಗಳಗೇನಾದರೂ ತೊಂದರೆ ಆಗಬಹುದಾ ಎಂಬ ಅನುಮಾನವಿದೆ, ಅದನ್ನೂ ತಾವು ಹೇಳಬೇಕು. ಇವತ್ತು ವಿರೋಧಪಕ್ಷದವರು ಟೀಕೆ ಮಾಡುವುದಕ್ಕಿಂತ ಹೆಚ್ಚಾಗಿ ಅವರ ಭಾವನೆಗಳನ್ನು ಅರ್ಥಮಾಡಿಕೊಂಡು ಸರ್ಕಾರಗಳು ಕೆಲಸ ಮಾಡಬೇಕು. ಈಗಾಗಲೇ ಅಂದಾಜು ಸಮಿತಿ ಪಕ್ಷಾತೀತವಾಗಿ ರಾಜ್ಯದ ಹಿತದೃಷ್ಟಿಯಿಂದ ಕೊಡುವ ವರದಿಗಳಿಗೆ ಹೆಚ್ಚಿನ ಮಾನ್ಯತೆ ಬೆಲೆ ಬಂದಿಲ್ಲವೆಂಬ ಭಾವನೆ ಇವತ್ತಿದೆ. ಇದು ಅನೇಕ ಸಂದರ್ಭಗಳಲ್ಲಿ ಚರ್ಚೆಯಾಗಿದೆ. ನಾಳೆ ವಿಧಾನಸಭೆ ಮುಗಿಯುತ್ತಿರುವಾಗ, ಬೀದರ್ ಗುಲ್ಬರ್ಗ ಭಾಗಗಳಲ್ಲಿ ಪಿಕೆಟಿಂಗ್ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ನಿಮ್ಮ ಅಂತಿಮ ಸಂದೇಶವೇನೆಂದು ನಿರೀಕ್ಷೆ ಮಾಡುತ್ತಾರೆ, ಅದರ ಬಗ್ಗೆಯೂ ತಾವು ಪ್ರಸ್ತಾಪಿಸಬೇಕಾಗಿತ್ತು. ಅಂದಾಜು ಸಮಿತಿಗೆ ತಮ್ಮ ಪಕ್ಷದವರೇ ಅಧ್ಯಕ್ಷರಾಗಿದ್ದು ವರದಿ ಕೊಟ್ಟಾಗ ಆ ವರದಿಗೆ ಯಾವ ರೀತಿ ತಾವು ಸ್ಪಂದಿಸುತ್ತೀರಿ ಎಂಬುದು ಬಹಳ ಮುಖ್ಯ ಮಂತ್ರಿಗಳಿಂದ ಹೆಚ್ಚಿನ ಉತ್ತರವನ್ನು ಇವತ್ತು ಜನರು ಬಯಸುತ್ತಾರೆ. ದಯಮಾಡಿ ನಾನು ಎತ್ತಿರುವ ಆಕ್ಷೇಪಣೆಗಳಿಗೆ ಉತ್ತರ ಕೊಡಬೇಕೆಂದು ಕೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಕೆ. ಎಸ್. ಈಶ್ವರಪ್ಪ : ಅಧ್ಯಕ್ಷರೇ, ಮುಖ್ಯಮಂತ್ರಿಗಳು ಕೊಟ್ಟ ಉತ್ತರದಿಂದ ಬೇರೆ ರಾಜ್ಯದ ಪ್ರಮುಖರು ಇಲ್ಲಿ ಕೂತಿದ್ದಿದ್ದರೆ ವಿದ್ಯುತ್, ಕೃಷಿ, ನೀರಾವರಿ, ಟ್ರಾನ್ಸ್‌ಪೋರ್ಟ್ ಸಮಸ್ಯೆಗಳ ಬಗ್ಗೆ ಇಡೀ ದೇಶದಲ್ಲಿ ಯಾರೂ ಮಾಡದೇ ಇರುವ ಕೆಲಸವನ್ನು ನೋಡಿ ಮುಖ್ಯಮಂತ್ರಿಗಳ ಉತ್ತರ ತುಂಬ ಸಿಹಿಯಾಗಿತ್ತು, ಎಂದು ತೃಪ್ತಿಪಟ್ಟುಕೊಂಡು ಹೋಗುವ ಸ್ಥಿತಿ ಇತ್ತು. ಆದರೆ ವಿದ್ಯುತ್ ಬಗ್ಗೆ ಸ್ಪಷ್ಟವಾಗಿ ಮುಖ್ಯಮಂತ್ರಿಗಳು ಹೇಳಿದರು. 13 ಸಾವಿರ ಮೆಗಾವ್ಯಾಟ್ ಬೇಕಾಗಿರುವಂತಹ ರಾಜ್ಯದಲ್ಲಿ ಇವತ್ತು ಮೂರೂವರೆ ಸಾವಿರ ಮೆಗಾವ್ಯಾಟ್ ಇದೆ. ರಾಜ್ಯದಲ್ಲಿ 33 ಪರ್ಸೆಂಟ್‌ನಷ್ಟು , ಹೈಯೆಸ್ಟ್ ಇನ್ ಇಂಡಿಯಾ ನಾವು ಉತ್ಪಾದಿಸಿದ್ದೇವೆ ಎಂದು ಅವರು ಹೇಳುತ್ತಿರುವಾಗ ಹೆಚ್ಚಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಈ ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಿಗದೇನೆ ಮುಚ್ಚಿರುವುದು ಎಷ್ಟು ಎಂದು ಕೈಗಾರಿಕಾ ಸಚಿವರು ತಿಳಿಸಲಿ. ವಿದ್ಯುತ್ತೇ ಇಲ್ಲ. ಅದಕ್ಕೆ ಏನು ವ್ಯವಸೆ? ಈ ದಿಕ್ಕಿನಲ್ಲಿ ತಕ್ಷಣ ಯೋಚನೆ ಮಾಡಿ ಇಲ್ಲದಿದ್ದರೆ ಮುಖ್ಯಮಂತ್ರಿಗಳಿಗೆ ಚೆನ್ನಾಗಿ ಭಾಷಣ ಮಾಡಲು ಬರುತ್ತದೆ, ಅಭ್ಯಾಸವೂ ಇದೆ ಇಂಡಸ್ಟ್ರಿ ಮುಚ್ಚಿದಾಗ, ಕಾರ್ಮಿಕರು, ಕೆಎಸ್‌ಎಫ್‌ಸಿ ಸಾಲ ಪಡೆದಿರುವವರು ಎಲ್ಲರೂ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಕಟ್ಟಿಕೊಂಡಿದ್ದಾರೆ. ಈ ದಿಕ್ಕಿನಲ್ಲಿ ಮುಖ್ಯಮಂತ್ರಿಗಳು ತಕ್ಷಣ ಗಮನಹರಿಸಬೇಕಾಗುತ್ತದೆ. ಕೈಗಾರಿಕೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು. ಯಾವುದೇ ಕೆಐಡಿಬಿ ಏರಿಯಾಕ್ಕೆ ಅವರು, ಸಚಿವರು ಹೋಗಿಬರಲಿ, ನೀರು ಕೂಡ ಇಲ್ಲ ಅವರಿಗೆ. ವಿದ್ಯುತ್ ಆಮೇಲೆ. ಸಬ್ಸಿಡಿ ಕೊಟ್ಟಿಲ್ಲ, ಅನೇಕ ವರ್ಷಗಳಿಂದ. ಇಂತಹ ಸಣ್ಣಪುಟ್ಟ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿಕೊಡುವ ದಿಕ್ಕಿನಲ್ಲಿ ಸಚಿವರು ಪ್ರಯತ್ನ ಮಾಡಬೇಕೆಂದು ಹೇಳಲು ಇಷ್ಟಪಡತ್ತೇನೆ. ವೀರಪ್ಪನ್ ಬಗ್ಗೆ ಪ್ರಸ್ತಾಪಿಸಿದರು. ರಾಜ್ಯದಲ್ಲಿ ಅಪರಾಧ, ಕೋಮುಗಲಭೆಗಳು ನಿಜಕ್ಕೂ ಕಡಿಮೆಯಾಗಿದೆ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿರೋಧಪಕ್ಷವಾಗಿ ಎಲ್ಲಾ ವಿರೋಧ ಮಾಡುವುದಕ್ಕೆ ಖಂಡಿತಾ ನಾನು ಇಲ್ಲ. ಆದರೆ ಅನೇಕ ಭಾಗದಲ್ಲಿ ಪತ್ರಿಕೆಗಳನ್ನು ಓದುತ್ತಿರಬೇಕಾದರೆ ಹೊಸಕೋಟೆ ಬೇರೆ ಬೇರೆ ಭಾಗದ್ದು ಸಾರಾಸಗಟಾಗಿ

ದಯವಿಟ್ಟು ತಿರಸ್ಕಾರ ಮಾಡಿಹಾಕಬೇಡಿ. ಘಟನೆ ನಡೆದಿದೆ. ಕೆಲವು ಪ್ರಭಾವಿವ್ಯಕ್ತಿಗಳು, ಕೆಲವು ರಾಜಕಾರಣಿಗಳು ಈ ದಿಕ್ಕಿನಲ್ಲಿ ಹಿಂದೆ ಇದ್ದಾರೆ. ಅವರಿಗೆ ಏನೂ ನಡೆದಿಲ್ಲ ಎಂದು ಕ್ಲಿನ್‌ಚಿಟ್‌ನ್ನು ನೀವು ಇಲ್ಲಿಂದ ಕೊಟ್ಟುಬಿಟ್ಟರೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳೇ ಹೇಳಿದ್ದಾರೆ ಬಿಡಿ, ನಡೆದುಹೋಗುತ್ತೆ ಎನ್ನುವುದು ಆಗುತ್ತೆ. ಅಲ್ಲೊಂದು ಇಲ್ಲೊಂದು ಏನು ನಿಮ್ಮ ಗಮನಕ್ಕೆ ಬಂದಿದೆ, ಬಂದಿರುವ ಕಡೆ ಸರಿಯಾದ ಬಲಿಯನ್ನು ನಾವು ಹಾಕುತಿದ್ದೇವೆ ಎನ್ನುವ ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ದಿಕ್ಕಿನಲ್ಲಿ ತಾವು ಪ್ರಯತ್ನ ಮಾಡಬೇಕೆಂದು ನನ್ನ ಪ್ರಾರ್ಥನೆ. ಅದೇ ರೀತಿ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಹೇಳಿದರು. ಮೊದಲನೆ ಸಾರಿ ಲುಕ್ಸಾನು ಇಲ್ಲದೆ ನಡೆದಿರುವುದು ಎಂದು. ಎಷ್ಟು ದರವನ್ನು ಜಾಸ್ತಿ ಮಾಡಿದಿರಿ. ಕೆಎಸ್‌ಆರ್‌ಟಿಸಿ ದರವನ್ನು ಜಾಸ್ತಿ ಮಾಡುತ್ತಾ ಲುಕ್ಸಾನು ಇಲ್ಲವೆಂದು ಹೇಳಿದರೆ ಅರ್ಥವಿಲ್ಲ. ಎಷ್ಟು ಸೋರಿಕೆಯನ್ನು ನಿಮ್ಮ ಕಾಲದಲ್ಲಿ ಕಡಿಮೆ ಮಾಡಿದ್ದೀರಿ. ಎಲ್ಲೆಲ್ಲಿ ಲೂಟಿಯಾಗಿದೆ, ಯಾವುದೇ ದರವನ್ನು ಜಾಸ್ತಿ ಮಾಡಿಲ್ಲ ಎಂದು ಈ ಮಾತನ್ನು ಹೇಳಿ ಅದರ ಮುಖಾಂತರ ಲಾಭ ಬಂದಿದೆ ಎಂದು ಹೇಳಿದರೆ ನಿಜಕ್ಕೂ ನಾವು ಕೂಡ ಶಹಭಾಷ್‌ಗಿರಿಯನ್ನು ಕೊಡುತ್ತಿದ್ದೆವು. ಒಂದು ಕಡೆ ಸೋರಿಕೆ ನಡೆಯುತ್ತಲೇ ಇದೆ. ಪ್ರಯಾಣಿಕರ ಮೇಲೆ ಸಿಕ್ಕಾಪಟ್ಟೆ ದರವನ್ನು ಇವರು ಜಾಸ್ತಿ ಮಾಡಿಕೊಂಡು ಅದರ ಮುಖಾಂತರ ನಾವು ಲುಕ್ಸಾನು ಇಲ್ಲದೆ ನಡೆಸಿದ್ದೇವೆ ಎಂದರೆ ಅರ್ಥವಿಲ್ಲ. ಇನ್ನು ಮುಂದಾದರೂ ಕೂಡ ಏನು ದರವನ್ನು ಈಗ ಏರಿಸಿದ್ದೀರಿ, ಏರಿಸಿರುವುದನ್ನು ಕಡಿಮೆ ಮಾಡುವುದಕ್ಕೆ ನಿಮಗೆ ಸಾಧ್ಯ ಇಲ್ಲ. ಇನ್ನು ಮುಂದೆ ಯಾವುದೇ ಕಾರಣಕ್ಕೆ ನಮ್ಮ ಸರ್ಕಾರ ಇರುವ ತನಕವೂ ಕೂಡ ನಾವು ವಿದ್ಯುತ್ ದರವನ್ನು ಏರಿಸುವುದಿಲ್ಲ, ಸೋರಿಕೆಯನ್ನು ನಿಲ್ಲಿಸುತ್ತೇವೆ ಎನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ನನ್ನ ಪ್ರಾರ್ಥನೆ. ಅದೇ ರೀತಿ ಕೃಷಿ ಬಗ್ಗೆ ಮಾತನಾಡಿದರು. ನಿಜಕ್ಕೂ ಮಾನ್ಯ ಮಂತ್ರಿಗಳು ನಾಲ್ಕು ಗಂಟೆ ಭಾಷಣ ಮಾಡಿದ್ದು ಅದೇ ದೊಡ್ಡ ಸಾಧನೆ. ಎಷ್ಟರಮಟ್ಟಿಗೆ ಭಾಷಣ ಇತ್ತು ಎಂದರೆ ಹೂವು ಅರಳಿತು, ಹಣ್ಣು ಮಾಗಿತು, ಅದೇ ರೀತಿ ಎಷ್ಟು ಹೆಣ ಉರುಳಿತು ಎಂದು ಕೂಡ ಅದನ್ನು ಹೇಳಬೇಕಾಗುತ್ತೆ. ಬೆಳೆ ಹಾನಿಯಿಂದ ಇವತ್ತು ಬೀದರ್‌ನ ಎಂ.ಪಿ.ಯವರ ನೇತೃತ್ವದಲ್ಲಿ ಚಳುವಳಿ ನಡೆಯುತ್ತಿದೆ, ಏಕೆ ನಡೆಯುತ್ತಿದೆ. ಸದನ ಸಮಿತಿ ಕೊಟ್ಟಂಥ ವರದಿ ಕೂಡ ನಾವು ಜಾರಿಗೆ ತರಲಾರದ ಸಂದರ್ಭದಲ್ಲಿ ಇನ್ನೇನು ಮಾಡುವುದಕ್ಕಾಗುತ್ತೆ. ಸದನ ಸಮಿತಿ ಈ ರೀತಿ ವ್ಯವಸ್ಥೆ ಮಾಡಿದ ಸಂದರ್ಭದಲ್ಲಿ ಅದಕ್ಕೆ ಬೆಲೆ ಕೊಡುತ್ತೇವೆ ಎನ್ನುವ ಭಾವನೆಯಿಂದಲಾದರೂ ಹೇಳಿ. ಇಲ್ಲದಿದ್ದರೆ ಖಂಡಿತವಾಗಿಯೂ ಸದನದ ಸಮಿತಿಗಳಿಗೆ ಅರ್ಥವೇ ಇಲ್ಲ ಎನ್ನುವ ಸ್ಥಿತಿಗೆ ಬರುತ್ತದೆ. ಇಂಥ ವಿಶೇಷ ಸಂದರ್ಭದಲ್ಲಾದರೂ ಕೂಡ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ಅಲ್ಲಿ ಯಾರು ಚಳುವಳಿಯನ್ನು ನಡೆಸುತ್ತಿದ್ದಾರೆ, ಆ ಚಳುವಳಿಯನ್ನು ನಡೆಸುತ್ತಿರುವವರಿಗೆ ಚಳುವಳಿಯನ್ನು ನೀವು ನಿಲ್ಲಿಸಿ. ಖಂಡಿತಾ ರಾಜ್ಯ ಸರ್ಕಾರದವರು ನಾವು ನಿಮ್ಮ ಪರವಾಗಿ ಇದ್ದೇವೆ ಎನ್ನುವ ಘೋಷಣೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಮಾಡಬೇಕು. ಅದೇ ರೀತಿ ಕೃಷಿ ಸಚಿವರು ಮಾತನಾಡುತ್ತಿರುವ ಸಂದರ್ಭದಲ್ಲಿ ನಾವು ಕೇಳಿದೆವು. ಕಳಪೆ ಔಷಧಿಯಿಂದ ಸಾಕಷ್ಟು ನಷ್ಟವಾಗುತ್ತಿದೆ ಈ ರೀತಿ ಕಳಪೆ ಔಷಧಿಗಳು ಯಾರು ಮಾಡುವ

ಕಂಪನಿಗಳು ಇವೆ, ಅವರ ಬಗ್ಗೆ ಉಗ್ರವಾದ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಕೃಷಿ ಸಚಿವರು ವಿಧಾನಸಭೆಯ ಹೊರಗಡೆ ಹೇಳುತ್ತಿದ್ದಾರೆ. ವಿಧಾನಸಭೆಯಲ್ಲಿ ಅವರು ಹೇಳುತ್ತಾರೆ. ಅನೇಕರನ್ನು ನಾವು ಈ ದಿಕ್ಕಿನಲಿ ಅವರಿಗೆ ಕೇಸ್ ಹಾಕಿ ಕೋರ್ಟಿಗೆ ಕಳುಹಿಸಿದರೆ ಅವರಿಗೆ 300-400 ರೂಪಾಯಿ ಪೆನಾಲ್ಟಿಯನ್ನು ಹಾಕಿ ಕೋರ್ಟ್‌ನಿಂದ ವಾಪಸ್ ಕಳುಹಿಸಿಬಿಡುತ್ತಾರೆ, ನಾವೇನು ಮಾಡೋಣ ಎಂದು ಇಲ್ಲಿ ವಿಧಾನಸಭೆಯಲ್ಲಿ ನಿಸ್ಸಾಹಾಯಕತೆಯನ್ನು ತೋರಿಸಿ ಹೊರಗಡೆ ಪತ್ರಿಕಾಗೋಷ್ಟಿಯಲ್ಲಿ ಹೇಳುತ್ತಾರೆ., ನಾವು ಆಂಥವರಿಂದ ಕಳಪೆ ಬೀಜವನ್ನು ಕಳಪೆ ಔಷಧಿಯನ್ನು ತಯಾರು ಮಾಡುವ ಕಂಪನಿಯವರ ವಿರುದ್ಧ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರು ಉತ್ತರವನ್ನು ಹೇಳುವಾಗ ಅದನ್ನು ಹೇಳಿಲ್ಲ. ಹಾಗಾಗಿ ನಾನು ನಿಮಗೆ ಪ್ರಾರ್ಥನೆ ಮಾಡುತ್ತೇನೆ. ಈ ರೀತಿ ಕಳಪೆ ಔಷಧಿ ತಯಾರು ಮಾಡುವ ಆ ರೀತಿ ತಯಾರು ಮಾಡಿ ಮಾರಾಟ ಮಾಡುವ ಅಂಗಡಿಗಳ ಮೇಲೆ ಯಾವರೀತಿ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕೆಂದು ಕೇಳುತ್ತೇನೆ. ತುಂಬಾ ಸಂತೋಷದ ವಿಚಾರವೆಂದರೆ ಮಾನ್ಯ ಮುಖ್ಯಮಂತ್ರಿಗಳು ಚುನಾವಣೆ ಸುಧಾರಣೆ ಬಗ್ಗೆ ಹೇಳಿದರು. ನನಗನಿಸುತ್ತೆ. ಈ ರೀತಿ ವಿಧಾನಸಭೆಯಲ್ಲಿ ಚುನಾವಣೆ ಸುಧಾರಣೆಗಳ ಬಗ್ಗೆ ತುಂಬಾ ಸ್ಪಷ್ಟವಾಗಿ ಹೇಳಿದ ಮುಖ್ಯಮಂತ್ರಿಗಳು ಎಂದರೆ ಸನ್ಮಾನ್ಯ ಜೆ.ಹೆಚ್. ಪಟೇಲರು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಚುನಾವಣೆ ಎಂದತಕ್ಷಣ ಇವತ್ತು ರಾಜ್ಯದಲ್ಲಾಗಲಿ, ದೇಶದಲ್ಲಾಗಲಿ ನೇರವಾಗಿ ಕಾಣುತ್ತಿರುವುದು ಚುನಾವಣೆಯ ಹಿಂದಿನ ಎರಡು ಕತ್ತಲೆ ರಾತ್ರಿ. ಆ ಎರಡು ಕತ್ತಲೆರಾತ್ರಿಯಲ್ಲಿ ಡಿಸ್ಟಿಲರಿ ಕಂಪನಿಯಿಂದ ಲೋಡುಗಟ್ಟಲೆ ಬರುತ್ತಿರುವಂಥ ಲಿಕ್ಕರ್‌ಗಳಿಗೆ ಅದಕ್ಕೆ ಅರ್ಥವೇ ಇಲ್ಲ. ನಿಮ್ಮ ಕೈಯಲ್ಲೇ ಅಧಿಕಾರ ಇದೆ. ಅದಕ್ಕೇನು ಕೈವಾಡ ಹಾಕಿದ್ದೀರಿ? ಅಥವಾ ಆ ಚುನಾವಣೆಯ ಹಿಂದಿನ ಎರಡು ಕತ್ತಲೆ ರಾತ್ರಿಯಲ್ಲಿ ಪೋಲೀಸ್ ಇಲಾಖೆ ಇರಬಹುದು ಅಥವಾ ಬೇರೆ ಬೇರೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ಇರಬಹುದು ಲೋಡು ಗಟ್ಟಲೆ ಲಿಕ್ಕರನ್ನು ತುಂಬಿರುವ ಲಾರಿಗಳ್ನು ಹಿಡಿದುಕೊಟ್ಟರೆ ಎಷ್ಟು ಸೀಜ್ ಮಾಡಿದ್ದೀರಿ? ಎಷ್ಟು ಜನರನ್ನು ನೀವು ಅರೆಸ್ಟ್ ಮಾಡಿದ್ದೀರಿ? ಎಷ್ಟು ಜನರನ್ನು ಈ ದಿಶೆಯಲ್ಲಿ ತಾವು ಜೈಲಿಗೆ ಕಳುಹಿಸಿದ್ದೀರಿ? ಈ ವರದಿಯನ್ನಾದರೂ ತಾವು ಕೊಡಬಹುದು. ಇವತ್ತು ತಾವು ಈ ಒಂದು ಸದನದಲ್ಲಿ ಘೋಷಣೆಯನ್ನು ಮಾಡಿ. ಈ ರೀತಿ ಇನ್ನು ಮುಂದೆ ಯಾರಾದರೂ ಕೂಡ ಲೋಡುಗಟ್ಟಲೆ ಡಿಸ್ಟಿಲರಿ ಕಂಪನಿಯಿಂದ ತೆಗೆದುಕೊಂಡು ಬರುವ ಅಕ್ರಮವಾದ ಲಿಕ್ಕರನ್ನು ಸೀಜ್ ಮಾಡುವುದಲ್ಲದೆ ಸಂಬಂಧಪಟ್ಟ ವ್ಯಕ್ತಿಗಳನ್ನು ಸೆಕೆಂಡ್ಸ್ ಇರಬಹುದು, ಥರ್ಡ್ಸ್ ಇರಬಹುದು ಆ ಕಂಪನಿಗಳ ಲೈಸೆನ್ಸನ್ನು ರದ್ದುಮಾಡುತ್ತೇವೆ ಎನ್ನುವ ದಿಕ್ಕಿನಲ್ಲಿ ತಾವು ಪ್ರಯತ್ನವನ್ನು ಮಾಡಿ. ಕೊನೆಯದಾಗಿ, ಯುಕೆಪಿ ಕೆಲಸದ ಬಗ್ಗೆ, ಇದರ ಬಗ್ಗೆಯೇ ರಾಜ್ಯದಲ್ಲಿ ಒಂದು ರೀತಿ ಭಯ ಉಂಟಾಗುವ ಪ್ರಯತ್ನವನ್ನು ಕೆಲವು ವ್ಯಕ್ತಿಗಳು ಮಾಡುತ್ತಿದ್ದಾರೆ. ಯುಕೆಪಿ ಕೆಲವನ್ನು ನಿಲ್ಲಿಸುವ ಪ್ರಯತ್ನವನ್ನು ಕೆಲವು ರಾಜಕಾರಣಿಗಳು ಮಾಡುತ್ತಿದ್ದಾರೆ, ಕೆಲವು ವ್ಯಕ್ತಿಗಳು ಮಾಡುತ್ತಿದ್ದಾರೆ ಎಂದು ಭಯವಾಗುತ್ತಿದೆ. ಕೆಲಸಗಳು ಆಗುತ್ತಿರುವ ಸಂದರ್ಭದಲ್ಲಿ ಸನ್ಮಾನ್ಯ ಹಿಂದಿನ ಪ್ರಧಾನಮಂತ್ರಿ ದೇವೇಗೌಡರು, ಹಿಂದಿನ ಮಂತ್ರಿಗಳಾದ

ಜಾಲಪ್ಪನವರು ಸಿಬಿಐ ತನಿಖೆಯಾಗಬೇಕು ಎಂದು ಹೇಳುತ್ತಿದ್ದಾರೆ. ಆ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡಬೇಕೋ ಮಾಡಿ. ಯಾವುದೇ ಕಾರಣಕ್ಕೆ ಯಾವುದೇ ಒತ್ತಡಕ್ಕೆ ಮಣಿಯದೇ ಇನ್ನು ಹೆಚ್ಚಿನ ವೇಗದಲ್ಲಿ ಕೆಲಸವನ್ನು ಮಾಡುತ್ತೇವೆ ಎನ್ನುವ ಒಂದು ಆಶ್ವಾಸನೆಯನ್ನು ಈ ರಾಜ್ಯದ ಜನತೆಗೆ ಕೊಡಬೇಕು. ಹೆಚ್ಚಿನ ಹಣವನ್ನು ಆ ದಿಕ್ಕಿನಲ್ಲಿ ಬಿಡುಗಡೆ ಮಾಡಬೇಕು. ಮತ್ತು ಏನು ಕೆಲಸವಾಗುತ್ತಿದೆ, ಆ ಕೆಲಸ ಕೂಡ ಶರವೇಗದಲ್ಲಿ ಆಗುವ ದಿಕ್ಕಿನಲ್ಲಿ ನಾವು ಖಂಡಿತಾ ಮಾಡುತ್ತೇವೆ, ಯಾವುದೇ ಕಾರಣಕ್ಕೂ ಕೆಲಸವನ್ನು ನಾವು ನಿಲ್ಲಿಸುವುದಿಲ್ಲ ಎನ್ನುವ ಆಶ್ವಾಸನೆಯನ್ನು ತಾವು ಕೊಡಬೇಕು. ಒಟ್ಟಾರೆ ಈ ರೀತಿ ವಿದ್ಯುತ್ ಇರಬಹುದು, ಕೃಷಿ ಇರಬಹುದು, ಬಸ್ಸಿನ ವ್ಯವಸ್ಥೆ ಇರಬಹುದು, ಈ ಎಲ್ಲಾ ಪ್ರಯತಗಳನ್ನು ನೋಡಿದರೆ ತಾವು ಹೇಳಿದಿರಿ, ಬಹಳ ಕೆಲಸ ಮಾಡಿದ್ದೇವೆ, ಒಳ್ಳೆಯ ಕೆಲಸ ಮಾಡಿದಿರಿ, ನೀವು ಮನೆಗೆ ಹೋಗಿ ಎಂದರೆ ಹೇಗೆ? ಎಂದು ಹೇಳಿದಿರಿ. ನಾನು ಖಂಡಿತಾ ಅನೇಕ ವಿಚಾರಗಳನ್ನು ಹೇಳಿದ್ದೇನೆ. ನೀವು ನಿಜಕ್ಕೂ ಮನೆಗೆ ಹೋಗಬೇಕು. ಏಕೆಂದರೆ ಮಾಡಬಾರದ ಕೆಲಸಗಳೆಲ್ಲಾ ನಡೆದಿದೆ. ಏನು ಅಭಿವೃದ್ಧಿಯಾಗಬೇಕೋ ಆಗಿಲ್ಲ. ಮತ್ತು ಅನೇಕ ಶಾಸಕರು ಮಾತನಾಡಿದ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ರೀತಿ ಅನೇಕ ವಿಚಾರಗಳಿಗೆ ಉತ್ತರ ಈಗ ಸಿಕ್ಕಿಲ್ಲ. ಈಗಲೂ ಪ್ರಸ್ತಾಪ ಮಾಡುವುದಕ್ಕೆ ಅವಾಕಶ ಇಲ್ಲ. ಹಾಗಾಗಿ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಆ ದಿಕ್ಕಿನಲ್ಲಿ ಉತ್ತರ ಕೊಡಬೇಕು. ಮತ್ತು ಕೊನೆಯದಾಗಿ ತುಂಬಾ ನೋವಿನಿಂದ ನಾನು ಹೇಳುತ್ತಿದ್ದೇನೆ. ಈ ಎಪಿಎಂಸಿ ಮತ್ತು ಸಹಕಾರಿ ಕ್ಷೇತ್ರಕ್ಕೆ ನಾಮಿನೇಷನ್. ಕೇವಲ ಭಾಷಣದಲ್ಲೇ ಮಾತ್ರ ನಿಂತುಹೋಗಿದೆ. ಚುನಾವಣೆ ಮಾಡಿದ ಮೇಲೆ ಯಾವುದೋ ಕೆಲವು ವ್ಯಕ್ತಿಗಳು, ಕೆಲವು ಗುಂಪಿನವರು ಚುನಾವಣೆಯಲ್ಲಿ ಗೆದ್ದಾಗ ಈ ಸರ್ಕಾರದ ಹಿಡಿತ ಇರಬೇಕು ಎಂದು ತಿಳಿದುಕೊಂಡು ಯಾರೋ ಇಬ್ಬರು ಮೂವರು ಜನರಿಗೆ ನಾಮಿನೇಷನ್ ಮಾಡಿದರೆ ಚುನಾವಣೆಗೇನು ಬೆಲೆ ಇದೆ. ನಿಮ್ಮಂಥವರು ಮುಖ್ಯಮಂತ್ರಿಯಾಗಿರುವ ಸಂದರ್ಭದಲ್ಲೂ ಕೂಡ ಈ ನಾಮಿನೇಷನ್ ಇದೇ ರೀತಿ ಮುಂದವರೆದರೆ ಬರೀ ಭಾಷಣಕ್ಕೆ ಮಾತ್ರ ಮುಖ್ಯಮಂತ್ರಿಗಳು, ಸಹಕಾರಿ ಸಚಿವರು ಅಷ್ಟಕ್ಕೆ ಮಾತ್ರ ಸರ್ಕಾರ ಇದೆ ಎನ್ನುವ ಭಾವನೆ ಬರದ ರೀತಿಯಲ್ಲಿ ನಡೆದುಕೊಳ್ಳಬೇಕು. ಸಹಕಾರಿ ಸಚಿವರ ಭಾಷಣವನ್ನು ಅನೇಕ ಸಭೆಗಳಲ್ಲಿ ಕೇಳಿದ್ದೇನೆ. ತುಂಬಾ ಒಳ್ಳೆಯ ಭಾಷಣವನ್ನು ಮಾಡುತ್ತಾರೆ. ಬಸವಣ್ಣನ ವಚನಗಳನ್ನು ಹೇಳುತ್ತಾರೆ. ಆದರೆ ನಾಮಿನೇಷನ್ ಮಾತ್ರ ಮುಂದುವರಿಯುತ್ತಿದೆ. ಉತ್ತರ ಕೊಡುವ ಸಂದರ್ಭದಲ್ಲಿ ಕಠೋರವಾದ ಕ್ರಮವನ್ನು ತೆಗೆದುಕೊಳ್ಳಿ. ಯಾರಿಗೆ ಶಕ್ತಿ ಇದೆಯೋ ಅವರು ಅಧಿಕಾರವನ್ನು ನಡೆಸಲಿ ಈಗ ಚುನಾವಣೆಗಳನ್ನು ಮಾಡೋಣ. ಯಾವುದೇ ಕಾರಣಕ್ಕೂ ಕೂಡ ನಾವು ನಾಮಿನೇಷನ್ ಮಾಡುವುದಿಲ್ಲ ಎನ್ನುವ ಒಂದು ಪ್ರತಿಜ್ಞೆಯನ್ನು ಮಾಡುವ ಪ್ರಯತ್ನವನ್ನು ಮಾಡಬೇಕು. ನಾನು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಉತ್ತರ ಕರ್ನಾಟಕದ ಬಗ್ಗೆ ನಾನು ಮಾತನಾಡಿದ್ದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅದು ಅಭಿವೃದ್ಧಿಯಾಗಿಲ್ಲ ಎಂದು ಹೇಳಿ ಅಲ್ಲಿನ ಜನ ಬಹಳ ಒತ್ತಡ ಮತ್ತು ಹೋರಾಟಗಳನ್ನು ಮಾಡಿದ್ದಾರೆ. ಅವರು

ಕೇಳುವುದು ಸಾಧುವಾದುದೇ. ಆ ದೃಷ್ಟಿಯಿಂದ ತಮಗೇನು ನಾನು ಕೇಳುತ್ತಿದ್ದೇನೆಂದರೆ ನನ್ನ ಭಾಷಣದಲ್ಲಿ ಹೇಳಿದೆ. ಒಂದು ಆಯೋಗವನ್ನು ರಚನೆ ಮಾಡಿ ಆ ಜನರ ಪರಿಸ್ಥಿತಿ ಅತ್ಯಂತ ಹೀನಾಯವಾಗಿದೆ. ಅದನ್ನು ಸರಿಪಡಿಸುವ ವರದಿಯನ್ನಾದರೂ ತಯಾರು ಮಾಡಿ. ಅದರ ಬಗ್ಗೆ ಏನು ಅನುಕೂಲಗಳನ್ನು ಮಾಡಬೇಕೆನ್ನುವ ಬಗ್ಗೆ ಸರ್ಕಾರದವರು ಏನು ತೀರ್ಮಾನ ಮಾಡುತ್ತೀರಿ, ಮಾಡಿ. ಕೊಡಗಿನ ಬಗ್ಗೆ ನಾವ್ಯಾರು ಬೆಂಬಲವನ್ನು ಕೊಟ್ಟಿಲ್ಲ. ಕೊಡಗು ಬೇರೆ ಜಿಲ್ಲೆಯಾಗಬೇಕೆಂದು ಹೇಳಿ ನಾವ್ಯಾರು ಬೆಂಬಲವನ್ನು ಕೊಟ್ಟಿಲ್ಲ. ಬೆಂಬಲ ಕೊಡದಿದ್ದರೂ ಆ ಜನರ ಧ್ವನಿ ಏನು ಇದೆ, ಅದರ ಹಿಂದೆ ಇರುವ ನೋವು ಏನು ಇದೆ, ಅದರ ಬಗ್ಗೆಯೇನಾದರೂ ಇದ್ದರೆ.....

ಶ್ರೀ ಸಿದ್ಧರಾಮಯ್ಯ : ಆ ಜನರು ಸುಮ್ಮನೆ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸುಮ್ಮನೆ ಇದ್ದರೆ ನನ್ನದೇನೂ ಅಭ್ಯಂತರವಿಲ್ಲ. ಆದ್ದರಿಂದ ಅದರ ಬಗ್ಗೆ ತಾವು ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಮತ್ತು ಪೋಲೀಸರ ಬಗ್ಗೆ ನಾನು ಹೇಳಿದೆ. ತಾವು ಅನೇಕ ಸಾರಿ ಕೇಳಿದ್ದೀರಿ ಸಬ್ ಇನ್ಸ್‌ಪೆಕ್ಟರ್‌ರಿಂದ ಕೆಳಗಡೆ ವರ್ಗದವರಿಗೆ, ನಿಜ, ಈ ಹಂತದಲ್ಲಿ ಪೋಲೀಸರು ನಮ್ಮ ರಾಜ್ಯದಲ್ಲಿ ಕೆಲಸ ಮಾಡಿದ್ದಾರೆ. ತಾವು ಭಾಷಣ ಮಾಡುವಾಗ ನಮ್ಮ ರಾಜ್ಯದಲ್ಲಿ ಏನೂ ಗಲಾಟೆಗಳಿಲ್ಲ ಎಂದಿದ್ದೀರಿ, ನಿಜ ನನಗನಿಸುತ್ತೆ, 15-20 ವರ್ಷದ ಹಿಂದೆ ಭಾರೀ ಚಳುವಳಿಗಳು ವಿದ್ಯಾರ್ಥಿ ಚಳುವಳಿಗಳೆಲ್ಲಾ ನಡೆಯುತ್ತಿತ್ತು ಇದಕ್ಕೆ ಪೋಲೀಸ್ ಕಾರಣವೇ, ಅಥವಾ ಜನರೇ ನಿಶ್ಶಕ್ತಿಯಾಗಿಬಿಟ್ಟಿದ್ದಾರೆಯೋ ಎನ್ನುವ ಅನುಮಾನಗಳು ನಮಗೆ ಬಂದುಬಿಟ್ಟಿದೆ. 15 ವರ್ಷದಿಂದ ಈಚೆಗೆ ಆಗ ನಡೆಯುತ್ತಿದ್ದ ವಿದ್ಯಾರ್ಥಿ ಚಳುವಳಿ, ಕಾರ್ಮಿಕ ಚಳುವಳಿ ಇವೆಲ್ಲಾ ಒಂದು ರೀತಿ ಮಾಯಮಂತ್ರದಂತೆ ನಿಂತು ಹೋಗಿದೆ. ಕಾರಣವೇನು? ಅದು ಆಗಬೇಕು ಎನ್ನುವುದಲ್ಲ. ಇದಕ್ಕೆ ಸರ್ಕಾರಗಳು ಕಾರಣವೇ? ಪೋಲೀಸ್ ಕಾರಣವೇ? ಆದರೂ ಪೋಲೀಸರ ಬಗ್ಗೆ ಅಭಿನಂದನೆ ಇದೆ. ಹೊಯ್ಸಳ ಬಗ್ಗೆ ನನ್ನ ಭಾಷಣದಲ್ಲಿ ಹೇಳಿದೆ. ನಿಜವಾಗಿಯೂ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ 50 ಇರುವ ವಾಹನಗಳನ್ನು 100 ಮಾಡಿ ಎಂದು ಹೇಳಿದೆ. ಪ್ರತಿ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಒಂದೊಂದು ಇರಲಿ ಎಂದು ಹೇಳಿದೆ.

6.10 ಪಿಎಂ

ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ತಾವು ಅದರ ಬಗ್ಗೆ ಕ್ರಮ ಕೈಗೊಳ್ಳುವಾಗ ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ಅಣ್ವಸ್ತ್ರ ಪರೀಕ್ಷೆ ನಡೆದ ನಂತರ ಭಾರತಕ್ಕೆ ಬರುವ ಅನೇಕ ವಿದೇಶಿ ನೆರವು ನಿಂತು ಹೋಗಿದೆ. ಇದರಲ್ಲಿ ನನ್ನ ಅಂದಾಜಿನ ಪ್ರಕಾರ ಒಪ್ಪಂದವಾಗಿರುವಂತೆ ಕರ್ನಾಟಕಕ್ಕೆ ಸುಮಾರು 2,000 ಕೋಟಿ ರೂಪಾಯಿಗಳಷ್ಟು ಹಣ ಬರಬೇಕಾಗಿತ್ತು. ಬೆಂಗಳೂರಿನ ಕುಡಿಯುವ ನೀರಿನ ಯೋಜನೆಗೆ ಜಪಾನ್‌ನಿಂದ ಹಣ ಬರಬೇಕಾಗಿದೆ. ಜಪಾನ್ ಅಮೇರಿಕಾ ಮುಂತಾದ ಬೇರೆ ದೇಶಗಳಿಂದ ಬರುವ ಹಣ ನಿಂತಾಗ ಮುಂದೆ ನಮ್ಮ ರಾಜ್ಯದ ಅಭಿವೃದ್ಧಿ

ಕಾರ್ಯಗತಿ ಏನು? ಎಂಬ ಬಗ್ಗೆ ಸ್ಪಷ್ಟಪಡಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಕನ್ನಡ ಮತು ಸಂಸ್ಕೃತಿ ಇಲಾಖೆ ರಾಜ್ಯಕ್ಕೆ ಕಿರೀಟ ತರತಕ್ಕಂಥ ಇಲಾಖೆಯಾಗಿದ್ದು, ಈ ಇಲಾಖೆಯ ಸಚಿವರನ್ನು ಸಂಪುಟ ದರ್ಜೆಗೇರಿಸಬೇಕೆಂದು ನನ್ನ ಭಾಷಣದಲ್ಲಿ ತಿಳಿಸಿದ್ದೆ. ಕಾರಣವೇನೆಂದರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಸಚಿವ ಸಂಪುಟ ದರ್ಜೆಯಲ್ಲಿದ್ದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ರಾಜ್ಯ ಮಟ್ಟದವರಾಗಿದ್ದು ಒಂದಕ್ಕೊಂದು ಸಂಬಂಧವಿರುವುದಿಲ್ಲ. ಅದುದರಿಂದ, ಇಲಾಖೆಗೆ ಹೆಚ್ಚು ಶಕ್ತಿ ಬರಬೇಕಾದರೆ ಇಲಾಖಾ ಸಚಿವರನ್ನು ಸಂಪುಟ ದರ್ಜೆಗೇರಿಸಬೇಕು. ತಾವು ರಾಜ್ಯದಲ್ಲಿ ಹೊಸ ಜಿಲ್ಲೆಗಳನ್ನು ರಚನೆ ಮಾಡಿ ಅಸ್ತಿತ್ವಕ್ಕೆ ತಂದಿರುವುದಕ್ಕೆ ತಮಗೆ ನಾನು ಅನೇಕ ಬಾರಿ ಅಭಿನಂದನೆ ಸಲ್ಲಿಸಿದ್ದೇನೆ. ಇದರ ಜೊತೆಗೆ ಇನ್ನೂ ಅನೇಕ ಕಾರ್ಯಗಳನ್ನು ಮಾಡಿದ್ದೀರಿ ಅದನ್ನು ಸಾರಾಸಗಟಾಗಿ ತಳ್ಳಿ ಹಾಕುವುದಿಲ್ಲ. ನೀವು ಮಾಡಿರುವ ಅನೇಕ ಕಾರ್ಯಗಳು ಜನರಿಗೆ ತಲುಪಿಲ್ಲ, ಈ ದಿಸೆಯಲ್ಲಿ ತಾವು ಸ್ವಲ್ಪ ಯೋಚಿಸಬೇಕು. ತಾವು ಏಳು ಹೊಸ ಜಿಲ್ಲೆಗಳನ್ನು ಏನು ರಚಿಸಿದ್ದೀರಿ, ಇದನ್ನು ಯಾರಿಂದಲೂ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ತಾವು ಹೊಸ ಜಿಲ್ಲೆಗಳನ್ನು ರಚಿಸುವುದರ ಮೂಲಕ ಇತಿಹಾಸ ನಿರ್ಮಿಸಿದ್ದೀರಿ. ಇದಕ್ಕೆ ತಮಗೆ ಎಷ್ಟು ಪ್ರಚಾರ ಸಿಗಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ. ತಾವು ಜನರಿಗಾಗಿ ಮಾಡುವ ಅನೇಕ ಅನುಕೂಲಗಳು ಯಾವ ಕಾರಣಕ್ಕೋಸ್ಕರ ಅವರಿಗೆ ತಲುಪುತ್ತಿಲ್ಲವೆನ್ನುವುದನ್ನು ಹೇಳಬೇಕು ಹಾಗೆಯೇ ವಿದೇಶಿ ನೆರವು ನಿಂತಿರುವ ಬಗ್ಗೆ ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇಂದು ಆರು ಗಂಟೆಗೆ ನಮಗೆ ಒಂದು ಕಾರ್ಯಕ್ರಮವಿದ್ದು, ಯಾರ್ಯಾರು ಕಳೆದ ಐದು ದಿನಗಳಿಂದ ಕಂಪ್ಯೂಟರ್ ತರಬೇತಿ ಕ್ಲಾಸ್‌ನಲ್ಲಿ ಪಾಲ್ಗೊಂಡಿದ್ದರು, ಅವರಿಗೆ ಸರ್ಟಿಫಿಕೇಟ್‌ಗಳನ್ನು ವಿತರಿಸಲಿದ್ದು ಈಗಾಗಲೇ 6.10 ಗಂಟೆಯಾಗಿದ್ದು, ಶ್ರೀರಾಮರೆಡ್ಡಿಯವರು ತಮ್ಮ ಮಾತು ಮುಗಿಸಿದ ನಂತರ ಮತ್ಯಾರಿಗೂ ನಾನು ಮಾತನಾಡಲು ಅವಕಾಶ ಕೊಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲನೆಯದಾಗಿ, ಉನ್ನತ ಶಿಕ್ಷಣದ ಬಗ್ಗೆ ಸರ್ಕಾರದ ಧೋರಣೆ ಏನಿದೆಯೆಂಬುದನ್ನು ಪ್ರಕಟಿಸಬೇಕು, ಎರಡನೆಯದಾಗಿ, ಆಡಳಿತ ಯಂತ್ರಾಂಗವನ್ನು ಚುರುಕುಗೊಳಿಸಿ ಅದರ ಖರ್ಚು-ವೆಚ್ಚಗಳನ್ನು ಕಡಿಮೆ ಮಾಡುವುದಕ್ಕೆ ಮತ್ತು ಅನಾವಶ್ಯಕವಾಗಿರುವ ಹುದ್ದೆಗಳನ್ನು ತೆಗೆದುಹಾಕುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದರ ಬಗ್ಗೆ ಮೂರನೆಯದಾಗಿ, ಲೋಕಸೇವಾ ಆಯೋಗದ ಬಗ್ಗೆ ನಾಲ್ಕನೆಯದಾಗಿ, ಸ್ವಯಂ ಸೇವಾ ಸಂಘಟನೆಗಳಲ್ಲಿನ ಅವ್ಯವಹಾರಗಳ ಬಗ್ಗೆ ಸಿ.ಬಿ.ಐ. ತನಿಖೆ ನಡೆಸಬೇಕೆಂಬುದರ ನನ್ನ ಒತ್ತಾಯ ಈ ನಾಲ್ಕು ವಿಷಯದ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಚಂದ್ರಶೇಖರ್. ಎಂ. ಮಾಮನಿ (ಉಪಾಧ್ಯಕ್ಷರು) : ಕಾನ್‌ಸ್ಟಿಟ್ಯೂಷನ್ ಕ್ಲಬ್ ಬಗ್ಗೆ ಕಳೆದ ಅಧಿವೇಶನದಲ್ಲಿ ಬೇಡಿಕೆ ಸಲ್ಲಿಸಿ ಆ ಕುರಿತು ಒಂದು ನಿರ್ಣಯ ಪ್ರಕಟಿಸಬೇಕೆಂದು ಕೇಳಿದ್ದೆವು.

ಶ್ರೀ ಜೆ.ಹೆಚ್. ಪಟೇಲ್ : ಇದರ ಬಗ್ಗೆ ಚರ್ಚೆಯ ಅವಶ್ಯಕತೆಯಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅನೇಕ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಬಿಲ್‌ಗಳು ಪೆಂಡಿಂಗ್ ಇವೆ. ಅಲ್ಲದೆ, ಎರಡು ಲಕ್ಷ ರೂಪಾಯಿ ಮೇಲ್ಪಟ್ಟಿರುವ ಯಾವುದೇ ಬಿಲ್ಲನ್ನು ಪಾಸ್ ಮಾಡಬಾರದೆಂದು ತಾವು ಪ್ರತಿಯೊಂದು ಟ್ರೆಜರಿಗೂ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಚಂದ್ರರವರು ಹೇಳಿರುವಂತೆ ನಾವು ಸಣ್ಣ ಪ್ರಮಾಣದ ಕೈಗಾರಿಕೆಗಳ ಕಡೆ ಗಮನಹರಿಸಬೇಕೆಂದು ಹೇಳಿರುವುದರಿಂದ ಅದರ ಬಗ್ಗೆ ವಿಚಾರ ಮಾಡುತ್ತೇವೆ. ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಬಗ್ಗೆಯೂ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಮೆಗಾ ಪ್ರಾಜೆಕ್ಟ್‌ಗಳತ್ತ ಗಮನಹರಿಸಬೇಕಾಗಿದ್ದರೆ ರಾಜ್ಯದ ಸ್ಥಿತಿ-ಗತಿ ಬಗ್ಗೆಯೂ ಆಲೋಚಿಸಬೇಕಾಗುತ್ತದೆ. ಈ ದಿಸೆಯಲ್ಲಿ ಸಬ್ಸಿಡಿಗೆ, ವಿದೇಶಿ ಹಣ ಉಪಯೋಗಿಸಿಕೊಳ್ಳುವುದಕ್ಕೆ ಭಾರತ ಸರ್ಕಾರದ ಗೈಡ್‌ಲೈನ್ಸ್ ಬೇಕಾಗುತ್ತದೆ, ಕೆಲವಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕು. ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಬಂಡವಾಳ ಹೂಡಲು ಬೇರೆ ದೇಶಗಳು ಸಹಕರಿಸುವುದಿಲ್ಲ. ಇನ್ನು ಕೊಲೆಗಳ ವಿಚಾರವಾಗಿ ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ; ಇವು ರಾಜಕೀಯಪ್ರೇರಿತ ಕೊಲೆಗಳೇ ಅಥವಾ ಯಾವುದಾದರೂ ಶಕ್ತಿ ಕೊಲೆಗಳ ಹಿಂದೆ ಇವೆಯೇ? ಇಲ್ಲವೇ? ಎಂಬುದರ ಕುರಿತು ಪೂರ್ತಿಯಾಗಿ ವಿಚಾರ ಮಾಡೋಣ. ಹಾಗೆಯೇ ವಾಟಾಳ್ ನಾಗರಾಜ್‌ರವರು ಕೇಳಿರುವುದಕ್ಕೆ ಉತ್ತರವಾಗಿ ಹೇಳುವುದಾದರೆ, ಕರ್ನಾಟಕದ ವಿಭಜನೆ ಬಗ್ಗೆ ಯೋಚನೆ ಮಾಡುವ ಪ್ರಶ್ನೆಯಲ್ಲ. ಆ ಪ್ರದೇಶದಲ್ಲಿ ಇಂಡಸ್ಟ್ರಿ, ಎಜುಕೇಷನ್, ಇರಿಗೇಷನ್ ಮತ್ತು ಹೆಲ್ತ್ ಈ ನಾಲ್ಕು ಇಲಾಖೆಗಳಿಂದ ಏನೇನು ಕೆಲಸಗಳಾಗಿವೆ ಎಂಬ ಬಗ್ಗೆ ನಾವು ಹುಬ್ಬಳ್ಳಿಯಲ್ಲಿ ಕ್ಯಾಬಿನೆಟ್ ಮೀಟಿಂಗ್ ಮಾಡಿದಂಥ ಸಂದರ್ಭದಲ್ಲಿ ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಮೂರು ಜನರನ್ನು ಕಳುಹಿಸಿ ಒಂದು ರಿಪೋರ್ಟ್ ತರಿಸಿದ್ದೇವೆ. ಇನ್ನು ನಾವು ಮಾಡಿರುವ ಕೆಲಸಗಳ ಬಗ್ಗೆ ಪ್ರಚಾರ ಮಾಡುವಲ್ಲಿ ಹಿಂದೆ ಉಳಿದಿಲ್ಲ, ಹಿಂದುಳಿಯುವುದಕ್ಕೆ ಸಾಧ್ಯವಿಲ್ಲ. ಭಾರತ ಅಣ್ವಸ್ತ್ರ ಪರೀಕ್ಷೆ ನಡೆಸಿರುವುದರಿಂದ ಕೆಲವು ದೇಶಗಳು ಆರ್ಥಿಕ ದಿಗ್ಬಂಧನ ವಿಧಿಸಿರುವುದರಿಂದ ವಿದೇಶಿ ನೆರವು ನಿಂತುಹೋಗಿರುವ ಬಗ್ಗೆ ಕೇಳಿದ್ದೀರಿ. ಅಣ್ವಸ್ತ್ರ ಪರೀಕ್ಷೆ ನಡೆಸಿರುವುದರಿಂದ ಆರ್ಥಿಕ ದಿಗ್ಬಂಧನ ವಿಧಿಸಿರುವ ರಾಷ್ಟ್ರಗಳೊಂದಿಗೆ ನಾವು ಪಾಲುದಾರಾಗಿರುವ ಯೋಜನೆಗಳಡಿ ಬರಬೇಕಾದಾ ಹಣದ ನೆರವು ನಿಂತು ಹೋಗುತ್ತದೆನ್ನು ಕಾರಣಕ್ಕೋಸ್ಕರ ಇವೊತ್ತು ನಮ್ಮ ರಾಷ್ಟ್ರದ ಸಾರ್ವಭೌಮತೆಯನ್ನು ನಾವು ಬಿಟ್ಟುಕೊಡುವುದಕ್ಕಾಗುವುದಿಲ್ಲ. ನೀವು ಅನುಮಾನಪಟ್ಟಿರುವಂತೆ ಆರ್ಥಿದ ವಿಚಾರದಲ್ಲಿ ತೊಂದರೆಯಾಗುತ್ತದೆ. ಬರೀ ನಮ್ಮ ರಾಜ್ಯವೊಂದೇ ಅಲ್ಲ, ಇಡೀ ರಾಷ್ಟ್ರಾದ್ಯಂತ ಇದರ ಪರಿಣಾಮವುಂಟಾಗುತ್ತದೆ, ಮೂರು ರಾಷ್ಟ್ರಗಳು ಆರ್ಥಿಕ ದಿಗ್ಬಂಧನ ವಿಧಿಸಿರುವುದರಿಂದ ತಕ್ಷಣಕ್ಕೆ ಆಡಚಣೆಯುಂಟಾಗುತ್ತದೆ, ಅದನ್ನು ನಾವು ಓವರ್‌ಕಮ್ ಮಾಡಬೇಕು, We cannot surrender our life, ಅದಕ್ಕೆ ನಾವೂ ತಯಾರಾಗಬೇಕು.

ಅಧ್ಯಕ್ಷರು : ಈಗ 1998-99ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ, "31.3.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 5, 6, 7, 9, 10, 11, 12, 13, 14, 15, 16, 17, 18, 19, 20, 21, 22, 23, 24, 25, 26, 27, 30, 31, 32, 33, 34, 35, 36, 37, 38, 39, 40, 41, 42, 43, 44, 45, 48, 49, 50, 51, 56, 57, 58, 59, 60, 61 ಮತ್ತು 62ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಅನುದಾನ ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 5 - ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,46,45,000 ರೂಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,97,50,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 6 - ಗಣಿ ಮತ್ತು ಭೂವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿಗಳು ಮತ್ತು ಭೂವಿಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,24,91,000 ರೂಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7 - ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದ "ಚಿಕ್ಕಪುಟ್ಟ ಉದ್ಯಮಿಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರ

ರಾಜಸ್ವ ಖಾತೆಯಲ್ಲಿ 21,60,43,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,55,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 9 - ಸಕ್ಕರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಬೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಕ್ಕರೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,94,44,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,10,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 10 - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೇಖನ ಸಾಮಗ್ರಿ ಮತ್ತು ಮುದ್ರಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,38,15,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 11 - ಉನ್ನತ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 93,31,35,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 12 - ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯುವಜನ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,72,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಯಾಚನೆ ಕ್ರಮಾಂಕ - 13 ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,18,04,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ - 14 ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,49,77,70,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 15 - ವರಮಾನ ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 19,18,38,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 16 - ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,59,11,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 17 - ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,99,88,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 18 - ಸಣ್ಣ ಉಳಿತಾಯ ರಾಜ್ಯ ಲಾಟರಿಗಳು, ಎಮೆ ಖಜಾನೆ ಮತ್ತು ಲೆಕ್ಕ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

"ಸಣ್ಣ ಉಳಿತಾಯ ರಾಜ್ಯ ಲಾಟರಿ, ವಿಮೆ, ಖಜಾನೆ ಮತ್ತು ಲೆಕ್ಕ ಆಡಳಿತಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 80,57,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19 - ಇತರೆ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರೆ ವಿವಿಧ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,00,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 - ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 48,84,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,75,000 ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 - ಅರಣ್ಯ

ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 65,84,64,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22 - ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯದ ಅಬಕಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,36,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಚನೆ ಕ್ರಮಾಂಕ 23 - ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾರಿಗೆ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,04,35,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ - 24 ಅರಕ್ಷಕ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಕ್ಷಕ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,48,32,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,02,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 25 - ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15,02,77,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 26 - ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ ಮತ್ತು ಪ್ರಚಾರಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,94,12,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಯಾಚನೆ ಕ್ರಮಾಂಕ 27 - ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸೋದ್ಯಮಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ 5,28,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 30 - ಗೃಹ ನಿರ್ಮಾಣ
(ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣಕ್ಕೆ" (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 43,89,09,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,20,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 31 - ನಗರಾಭಿವೃದ್ಧಿ

(ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮವನ್ನು ಹೊರತು ಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,39,06,59,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,01,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 32 - ಬೆಂಗಳೂರು ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,87,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತು ಬಂಡವಾಳ ಖಾತೆಯಲ್ಲಿ 55,17,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 33 - ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ನೀರಾವರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,75,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ

ಖಾತೆಯಲ್ಲಿ 28,90,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 34 - ಭಾರಿ ಮತ್ತು ಮಧ್ಯಮ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ನೀರಾವರಿಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,32,13,30,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,97,26,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 35 - ರಾಜ್ಯ ವಿಧಾನಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ವಿಧಾನ ಮಂಡಲ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,05,87,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 36 - ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 24,00,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 37 - ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,20,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 38 - ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ 12,46,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 39 - ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಿಲ್ಲಾಡಳಿತಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,33,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50,00,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 40 - ಸಾಮಾನ್ಯ ಆಡಳಿತ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಮಾನ್ಯ ಆಡಳಿತ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,38,70,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41 - ಯೋಜನೆ ಮತ್ತು ಸಾಂಖ್ಯಿಕ ಹಣಕಾಸು
(ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,78,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 42 - ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 23,19,75,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 43 - ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)" ಗಳಿಗೆ ಸಂದಾಯ ಮಾಡುವಲ್ಲಿ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 65,48,55,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,00,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44 - ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಕಟ್ಟಡಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,37,26,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 21,58,82,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45 - ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಸ್ತೆಗಳು ಮತ್ತು ಸೇತುವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 59,72,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 39,70,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 47 - ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71,78,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 48 - ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭೂ ಕಂದಾಯ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 61,06,17,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು

ಬಂಡವಾಳ ಖಾತೆಯಲ್ಲಿ 1,50,44,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು

ಅಭಯಾಚನೆ ಕ್ರಮಾಂಕ 49 - ಮುದ್ರಾಂಕಗಳು ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮುದ್ರಾಂಕಗಳು ಮತ್ತು ನೋಂದಣಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,47,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 50 - ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು"

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮತಿಯ ಮತ್ತು ಧರ್ಮದಾಯ ಸಂಸ್ಥೆಗಳು" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,80,97,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 51 - ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ3 1-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಕ್ಫ್" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 56 - ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ ಮತ್ತು ಉದ್ಯೋಗ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 31,62,05,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 57 - ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರ ಕಲ್ಯಾಣಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 77,33,28,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,31,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 58 - ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 50,09,13,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 59 - ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಮತ್ತು ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಮತ್ತು ಶಾಸ್ತ್ರ ಮತ್ತು ಪರಿಸರ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,67,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 60 - ಮಲೆನಾಡು ಪ್ರದೇಶ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಲೆನಾಡು ಪ್ರದೇಶ ಅಭಿವೃದ್ಧಿ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 61 - ಜವಳಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜವಳಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,32,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 59,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 62 - ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 22,71,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.